2011ರಲ್ಲಿ ತೆಗೆದುಕೊಂಡರೆ ಆ ಭಾಗದ ನಾಗರೀಕರಿಗೆ ಬಹಳ ಉಪಯುಕ್ತವಾಗುತ್ತದೆ. ಏಕೆಂದರೆ ಬೇರೆ ಎಲ್ಲಾ ಪಟ್ಟಣಗಳಲ್ಲಿ ಆಗಿದೆ. ಆದರೆ ಇನ್ನೂ ಮೂಡಬಿದರೆಯಲ್ಲಿ ಒಳಚರಂಡಿ ಯೋಜನೆ ಆಗದೇ ಇರುವಂಥದ್ದು, ಆ ಭಾಗದ ಜನರಿಗೆ ಬಹಳ ನೋವಾಗಿದೆ. ಮಾನ್ಯ ಮುಖ್ಯಮಂತ್ರಿಯವರು ಮೂಡಬಿದರೆ ಕ್ಷೇತ್ರಕ್ಕೆ ಭೇಟಿ ನೀಡಿದಂಥ ಸಂದರ್ಭದಲ್ಲಿ ಕೂಡ ಎಲ್ಲಾ ಜನರು ಪಕ್ಷ ಭೇದವನ್ನು ಮರೆತು ಅವರನ್ನು ಬೇಡಿಕೊಂಡಿದ್ದಾರೆ. ಇಲ್ಲಿ ರಾಜ್ಯದ ನಾನಾ ಭಾಗಗಳಿಂದ ಬಂದಂಥ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಆದುದರಿಂದ ಅದ್ಯತೆಯ ಮೇಲೆ ಈ ಸಾರಿಯ ಬಜೆಟ್‌ನಲ್ಲಿಯಾದರೂ ಸೇರಿಸಿ ಮಾಡಿಸಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಅಭಯಚಂದ್ರ ಜೈನ್‌ರವರಿಗೆ ಈ ಕಾರ್ಯವನ್ನು ತುರ್ತಾಗಿ ಈ ಸಾಲಿನಲ್ಲಿ ತೆಗೆದುಕೊಳ್ಳುತ್ತೇವೆಂದು ಅಭಯ ಕೊಡುತ್ತಿದ್ದೇನೆ.

ಮೈಸೂರು ನಗರದಲ್ಲಿ ಕೊಳಚೆ ಪ್ರದೇಶಗಳ ಮನೆಗಳ ಕಳಪೆ ಕಾಮಗಾರಿಯ ಬಗ್ಗೆ

102 (925) ಶ್ರೀ ತನ್ವೀರ್ ಸೇತ್ (ನರಸಿಂಹರಾಜ):- ಮಾನ್ಯ ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಮೈಸೂರು ನಗರದಲ್ಲಿರುವ ಘೋಷಿತ ಕೊಳಚೆ ಪ್ರದೇಶಗಳೆಷ್ಟು, ಘೋಷಣೆಯಾಗಬೇಕಾದ ಕೊಳಚೆ ಪ್ರದೇಶಗಳೆಷ್ಟು ?

ಆ) ಕೇಂದ್ರ ಸರ್ಕಾರದ ನರ್ಮ್ ಯೋಜನೆಯಡಿ ಮೈಸೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ;

ಇ) ಮೈಸೂರು ನಗದಲ್ಲಿ ಯಾವ ಯಾವ ಹಂತದಲ್ಲಿ ಎಷ್ಟೆಷ್ಟು ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ;

ಈ) ಮೈಸೂರು ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ವತಿಯಿಂದ

ನಿರ್ಮಾಣ ಮಾಡುತ್ತಿರುವ ಮನೆಗಳ ಕಾಮಗಾರಿ ಅತ್ಯಂತ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಕಳಪೆ ಕಾಮಗಾರಿಗೆ ಕಾರಣವಾಗಿರುವ ಅಧಿಕಾರಿ, ಸಿಬ್ಬಂದಿ ಮತ್ತು ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು):–

ಅ) ಮೈಸೂರು ನಗರದಲ್ಲಿ 62 ಘೋಷಿತ ಕೊಳಚೆ ಪ್ರದೇಶಗಳಿರುತ್ತವೆ. ಘೋಷಣೆಯಾಗಬೇಕಾಗಿರುವ ಕೊಳಚೆ ಪ್ರದೇಶಗಳ ಸಂಖ್ಯೆ 19.

ಆ) ಕೇಂದ್ರ ಪುರಸ್ಕೃತ ನರ್ಮ್ ಯೋಜನೆಯ ಬಿಎಸ್‌ಯುಪಿ ಯೋಜನೆಯಡಿ ಮೈಸುರು ನಗರದಲ್ಲಿ 6328 ಮನೆಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿರುತ್ತದೆ.

ಇ) ಮೈಸೂರು ನಗರದಲ್ಲಿ ನರ್ಮ್ ಯೋಜನೆಯ ಬಿಎಸ್‌ಯುಪಿಯಡಿ

1ನೇ ಹಂತದಲ್ಲಿ–2788 ಮನೆಗಳು

2ನೇ ಹಂತದಲ್ಲಿ–2500 ಮನೆಗಳು

3ನೇ ಹಂತದಲ್ಲಿ–1040 ಮನೆಗಳು ಹೀಗೆ

ಒಟ್ಟು 6328–ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

ಈ) ಇಲ್ಲಾ

ಉ) ಉದ್ಭವಿಸುವುದಿಲ್ಲ

ಶ್ರೀ ತನ್ವೀರ್‌ಸೇಠ್ : ಮಾನ್ಯ ಅಧ್ಯಕ್ಷರೆ, ಇವತ್ತು ಕರ್ನಾಟಕ ರಾಜ್ಯದಲ್ಲಿ ಎರಡು ನಗರಗಳಿಗೆ ಜವಹರಲಾಲ್ ನೆಹರು ನಗರ ಪುನಶ್ಚೇತನ ಯೋಜನೆ ಅಡಿಯಲ್ಲಿ ಸಾಕಷ್ಟು ಹಣ ಬರುತ್ತಿದೆ. ಆ ರೀತಿಯಾಗಿ ಇವತ್ತು ಮೈಸೂರು ನಗರಕ್ಕೆ ಸುಮಾರು 1,850 ಕೋಟಿ ರೂಪಾಯಿಗಳು ಬಂದು ಅನೇಕ ಕಾಮಗಾರಿಗಳು ನಡೆಯುತ್ತಿರುವಂತದ್ದು ಸರ್ಕಾರದ ಗಮನದಲ್ಲೂ ಇದೆ. ಇವತ್ತು ನಾನು ಕೇಳಿರುವಂತ ಪ್ರಶ್ನೆ ಏನೆಂದರೆ ಕೊಳಚೆ ಪ್ರದೇಶಗಳ

ಅಭಿವೃದ್ಧಿಗೆ ಸಂಬಂಧಪಟ್ಟಂತೆ ಸುಮಾರು 6,328 ಮನೆಗಳ ಕಾಮಗಾರಿ ಈಗಾಗಲೇ ಪ್ರಾರಂಭವಾಗಿದೆ. ಈ ಕಾಮಗಾರಿಗಳು ಕಳಪೆ ಕಾಮಗಾರಿಯಾಗುತ್ತಿರುವಂತದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಎಂದು ಪ್ರಶ್ನೆ ಕೇಳಿದರೆ ಇಲ್ಲ, ಎಂದು ಸರ್ಕಾರದಿಂದ ಉತ್ತರ ಬಂದಿದೆ. ಬಹುಶಃ ಇದು ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ಈಗಾಗಲೇ ಜಿಲ್ಲಾಧಿಕಾರಿಗಳನ್ನು ನರ್ಮ್ ಯೋಜನೆ ಅಡಿಯಲ್ಲಿ ವಿಶೇಷಾಧಿಕಾರಿಗಳನ್ನಾಗಿ ನೇಮಕ ಮಾಡಿರುವಂತವರಿಗೆ, ನಾನು ಮೂರು ತಿಂಗಳುಗಳ ಹಿಂದೆಯೇ ಪತ್ರಗಳನ್ನು ಬರೆದಿರುವಂಥ ಹಿನ್ನಲೆಯಲ್ಲಿ ಕೊಳಚೆ ನಿರ್ಮೂಲನಾ ಮಂಡಳಿಯ ಆಯುಕ್ತರಿಗೂ ಸಹ ಇದರ ಪರಿಶೀಲನೆ ಮಾಡಿ ವರದಿಯನ್ನು ಕೊಡುವಂತೆ ತಿಳಿಸಿದ್ದಾರೆ. ಇದು ಅಲ್ಲದೇ ಇವತ್ತು ನಾನು ಪ್ರಶ್ನೆಯನ್ನು ಕೇಳಬೇಕಾದರೆ ಕೇವಲ ಕಳಪೆ ಕಾಮಗಾರಿಯ ಬಗ್ಗೆ ಕೇಳಿದ್ದೇನೆ. ಇಲ್ಲಿ ಬಾಲ ಕಾರ್ಮಿಕರನ್ನು ಉಪಯೋಗಿಸಿಕೊಂಡು ಕಾಮಗಾರಿಯನ್ನು ಮಾಡುತ್ತಿರುವಂತ ವಿಷಯ ದಿನನಿತ್ಯ ಪತ್ರಿಕೆಗಳಲ್ಲೂ ಬರುತ್ತಿರುವಂಥದ್ದನ್ನು ನಾನು ಮಾನ್ಯ ಸಚಿವರ ಗಮನಕ್ಕೂ ಈಗಾಗಲೇ ತಂದಿದ್ದೇನೆ. ಮಾನ್ಯ ಸಚಿವರಿಂದ ನಾನು ಅಪೇಕ್ಷೆ ಪಡುವಂಥದ್ದು ಏನೆಂದರೆ, ಅವರು ಖುದ್ದಾಗಿ ಹೋಗಿ ಸ್ಥಳ ಪರಿಶೀಲನೆ ಮಾಡಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡರೆ, ಈ ಕಾಮಗಾರಿಯನ್ನು ಯಾರಿಗೋಸ್ಕರ ಮಾಡುತ್ತಿದ್ದೇವೆಯೋ ಅವರಿಗೆ ಅದು ಶಾಶ್ವತವಾಗಿ ಉಳಿಯಬೇಕಾಗುತ್ತದೆ. ಅದು ಕೇಂದ್ರ ಸರ್ಕಾರ ಹಣವಾಗಿರಬಹುದು, ರಾಜ್ಯ ಸರ್ಕಾರದ ಹಣವಾಗಿರಬಹುದು. ನಾವು ಕೆಲಸ ಏನು ಮಾಡುತ್ತಿದ್ದೇವೆ, ಇದರ ಪ್ರಯೋಜನ, ಇದರ ಸದ್ಬಳಕೆ ಆಗಬೇಕಾಗಿರುವಂಥದ್ದು ಅತ್ಯಂತ ಜರೂರಾಗಿದೆ. ಮಾನ್ಯ ಸಚಿವರಿಗೆ ಈಗಾಗಲೇ ನಾನು ಬರೆದಿರುವಂಥ ಪತ್ರಗಳ ಪ್ರತಿಗಳನ್ನು ಕೊಟ್ಟಿದ್ದೇವೆ. ಅವರು ಸ್ಥಳ ಪರಿಶೀಲನೆ ಮಾಡಿ, ಕ್ರಮ ತೆಗೆದುಕೊಳ್ಳುವುದಕ್ಕೆ ಮುಂದಾಗಬೇಕೆಂದು ಕೇಳಿಕೊಳ್ಳುತ್ತೇವೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು, ಈಗ ತಾನೇ ಅವರು ಬರೆದಿರುವಂಥ ಪತ್ರಗಳನ್ನು ನನಗೆ ಕೊಟ್ಟಿದ್ದಾರೆ. ಈ ಬಗ್ಗೆ ಕೆಲವು ಪತ್ರಿಕೆಗಳಲ್ಲಿ ಮಾಹಿತಿಗಳು ಬಂದಿರುವಂಥದ್ದನ್ನು ನನಗೆ ತೋರಿಸಿದ್ದಾರೆ. ಆ ರೀತಿಯಾಗಿ ಕಳಪೆ ಮಟ್ಟದ ಕಾಮಗಾರಿಗಳು ಏನಾದರೂ ಆಗಿದ್ದರೆ, ಖಂಡಿತವಾಗಿಯೂ ನಾವು ಸಹಿಸುವುದಿಲ್ಲ. ಆ ಅಧಿಕಾರಿಗಳು ಯಾರು ಇದ್ದಾರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಅಲ್ಲಿ ಇನ್ನು ಹೆಚ್ಚುವರಿಯಾಗಿ ಬೇರೆ ಅಧಿಕಾರಿಗಳನ್ನು ನೇಮಕ ಮಾಡಿ, ಶಾಸಕರನ್ನು ಸಹ

ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಗುಣಮಟ್ಟದ ಕಾಮಗಾರಿಯನ್ನು ಮಾಡುವುದಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೋಳುತ್ತೇವೆ. ಮತ್ತೆ ಈ ವಾರ ಅಥವಾ ಮುಂದಿನ ವಾರದಲ್ಲಿ ಮಾನ್ಯ ಶಾಸಕರ ಜೊತೆಯಲ್ಲಿ ಸ್ಥಳ ಪರಿಶೀಲನೆ ಮಾಡುತ್ತೇನೆ. ಆ ರೀತಿಯಾಗಿ ಏನಾದರೂ ಕಾಮಗಾರಿಯಲ್ಲಿ ಹೆಚ್ಚು ಕಡಿಮೆ ಆಗಿದ್ದರೆ ಗುತ್ತಿಗೆದಾರರ ಮೇಲೆ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನಕ್ಕೂ ಕಳಪೆ ಕಾಮಗಾರಿ ಯಾಗಿರುವಂತದ್ದು ಬಂದಿದೆ ಮತ್ತು ಅಲ್ಲಿ ಸಾರ್ವಜನಿಕರ ಗಮನಕ್ಕೂ ಬಂದಿದೆ. ಈ ವಿಷಯ ಪತ್ರಿಕೆಗಳಲ್ಲೂ ಸಹ ವರದಿಯಾಗಿದೆ. ಅಲ್ಲಿ ಅಧಿಕಾರಿಗಳು ಒಬ್ಬರ ಮೇಲೆ ಒಬ್ಬರು ಜವಾಬ್ದಾರಿಗಳನ್ನು ಹೇಳಿಕೊಂಡು ತಪ್ಪಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಕಾಮಗಾರಿ ಕಳಪೆಯಾಗಿರುವಂಥದ್ದು ನೂರಕ್ಕೆ ನೂರರಷ್ಟು ಸತ್ಯವಾಗಿದೆ. ನೀವು ಸ್ಥಳಕ್ಕೆ ಹೋಗಿ inspection ಮಾಡುವಂಥ ಕೆಲಸವನ್ನು ಆಮೇಲೆ ಮಾಡಿ, ಈಗ on the basis of the documents produced before you, ಅದರಲ್ಲಿ ಸ್ಪಷ್ಟವಾಗಿ ಕಾಮಗಾರಿ ಕಳಪೆಯಾಗಿದೆಯೆಂದು ಇದೆ. ಅದರ ಮೇಲೆ ತನಿಖೆ ಮಾಡುವುದಕ್ಕೆ ನೀವು ಆದೇಶ ಮಾಡಬೇಕು. ನೀವು ಹಿರಿಯ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ inspection ಮಾಡುವಂತದ್ದನ್ನು ಮಾಡಿ, ತಪ್ಪಿಸ್ಥರನ್ನು ಶಿಕ್ಷಿಸುವಂಥದ್ದನ್ನು ಮಾಡಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಅಲ್ಲಿ ಏನು ಕಾಮಗಾರಿಗಳು ನಡೆಯುತ್ತಿವೆ. ಅದಕ್ಕೆ ಉಪಯೋಗಿಸುವಂಥ ಸಾಮಗ್ರಿಗಳಿಗೆ ಮತ್ತು contact tube ಗಳಿಗೆ National Institute of Engineering, Mysore ಮತ್ತು Sri Jayachamarajendra College of Engineering ಇಲ್ಲಿ ಪರೀಕ್ಷೆ ಮಾಡಿ, ಸರಿ ಇವೆಯೆಂದು Fargil Foundation ನವರು, ಇವರೆಲ್ಲಾ design ಮತ್ತು drawing ಎಲ್ಲಾ ಕೊಟ್ಟಿದ್ದಾರೆ. ತಾವು ಹೇಳುವಂಥದ್ದು ಸರಿ ಇದೆ. ನಾನು ಖಂಡಿತವಾಗಿಯೂ ಇವತ್ತೆ enquiryಗೆ ಆದೇಶ ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ: ತನಿಖೆ ಮಾಡಿಸಿ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಈಗಾಗಲೇ ಆದೇಶ ಮಾಡುತ್ತೇನೆ

ಶ್ರೀ ತನ್ವೀರ್ ಸೇಠ್: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಮಧ್ಯೆ ಪ್ರವೇಶಿಸಬೇಕೆಂದು ಬಯಸುತ್ತೇನೆ. ರಾಜ್ಯದಲ್ಲಿ ನರ್ಮ್ ಯೋಜನೆ ಏನು ನಡೆಯುತ್ತಿದೆ. ಮೈಸೂರು ನಗರಕ್ಕೆ ಸುಮಾರು 1,850 ಕೋಟಿ ರೂಪಾಯಿಗಳು ಏನು ಬಂದಿದೆ. ಸರ್ಕಾರದಲ್ಲಿ 5 ಕೋಟಿ, 6 ಕೋಟಿ ರೂಪಾಯಿಗಳು ಇರುವಂಥದ್ದಕ್ಕೆ ಒಬ್ಬ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಹುದ್ದೆಗಳನ್ನು ನೇಮಕ ಮಾಡುತ್ತೇವೆ. ಇಲ್ಲಿ ಕೋಟ್ಯಾಂತರ ರೂಪಾಯಿಗಳು ಬರುವಂಥ ಜಾಗದಲ್ಲಿ ಒಬ್ಬ ವಿಶೇಷಾಧಿಕಾರಿ ಅವರು ಅವರ ಜವಾಬ್ದಾರಿಯನ್ನು ಬೇರೆಯವರ ಮೇಲೆ ತಳ್ಳಿ ಹಾಕುವಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿರಬೇಕಾದರೆ ನಗರದ ಪೂರ್ಣ ಅಭಿವೃದ್ಧಿಗೆ ತಾವು ಸಹಕರಿಸುತ್ತೇವೆಂಬ ತಮ್ಮ ಕನಸು ಏನು ಇದೆ. ಅದಕ್ಕೆ ಒಂದು ವಿಶೇಷ ತಂಡವನ್ನು ರಚಿಸಿ, ಅದು ಕಾಮಗಾರಿಯ ಗುಣಮಟ್ಟವಾಗಿರಬಹುದು ಅಥವಾ ಕಾಮಗಾರಿಯನ್ನು ಯಾವುದನ್ನು ಅಗತ್ಯ ರೂಪದಲ್ಲಿ ನಾವು ತೆಗದುಕೊಳ್ಳಬೇಕೆಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ನಮ್ಮ ನಗರದ ಶಾಸಕರ ಜೊತೆಗೆ ಒಂದು ಸಮಾಲೋಚನೆಯನ್ನು ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಈ ಸಂರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮೈಸೂರಿನಲ್ಲಿ ಒಳ್ಳೆಯ ಜಿಲ್ಲಾಧಿಕಾರಿಗಳಿದ್ದರು. ಅವರು ಒಳ್ಳೆಯ ಕೆಲಸವನ್ನು ಮಾಡಿದರು. ಈಗ ಮತ್ತೆ ಒಳ್ಳೆಯ ಜಿಲ್ಲಾಧಿಕಾರಿಗಳು ಬಂದಿದ್ದಾರೆ. ಆದುದರಿಂದ ತಾವು ಈಗ ಏನು ಸಲಹೆಗಳನ್ನು ಕೊಟ್ಟಿದ್ದೀರಿ, ಅದನ್ನು ಮನಸ್ಸಿನಲ್ಲಿಟ್ಟುಕೊಂಡು ಪೂರ್ಣ ಕೆಲಸವನ್ನು ಮಾಡುವುದಕ್ಕೆ ಏನೇನು ಸಾಧ್ಯವಿದೆಯೋ, ಅದೆಲ್ಲವನ್ನು ಮಾಡುತ್ತೇನೆ. ನಿಮ್ಮೆಲ್ಲರ ಸಲಹೆಗಳು ಏನು ಇವೆ, ಅವೆಲ್ಲವನ್ನು ನಾವು ಸ್ವೀಕಾರ ಮಾಡಿ, ಸೂಕ್ತ ಕ್ರಮವನ್ನು ತಕ್ಷಣ ತೆಗೆದುಕೊಳ್ಳುತ್ತೇನೆ.

ಕೆ.ಎ.ಎಸ್. ಅಧಿಕಾರಿಗಳ ಹುದ್ದೆಗಳ ಬಗ್ಗೆ

103 (665) ಶ್ರೀ ಮುನಿರಾಜು ಎಸ್ (ದಾಸರಹಳ್ಳಿ) :– ಮಾನ್ಯ ಮುಖ್ಯಮಂತ್ರಿಗಳು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ರಾಜ್ಯದಲ್ಲಿರುವ ಕೆಎಎಸ್ ಅಧಿಕಾರಿಗಳ ಹುದ್ದೆಗಳೆಷ್ಟು? (ಹೆಸರು ಹಾಗೂ ಹುದ್ದೆ ಸಹಿತ ಮಾಹಿತಿ ನೀಡುವುದು).